ಶೇಂಗಾ ಬೆಳೆಗೆ ದಾಖಲೆ ಬೆಲೆ

ಬಳ್ಳಾರಿ ಎಪಿಎಂಸಿ ಇತಿಹಾಸದಲ್ಲೇ ಅತಿ ಹೆಚ್ಚು ದರಕ್ಕೆ ಮಾರಾಟ

• ಹರಿಶಂಕರ್ ಆರ್.



ಬಳ್ಳಾರಿ: ಹಿಂಗಾರು ಹಂಗಾಮಿನಲ್ಲಿ ಬೆಳೆದ ಶೇಂಗಾಕ್ಕೆ ಬಂಪರ್ ಬೆಲೆ ಸಿಗುತ್ತಿದೆ. ಬಳ್ಳಾರಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ಜ. 23ರಂದು ದಾಖಲೆ ಬೆಲೆಗೆ ಶೇಂಗಾ ಮಾರಾಟವಾಗಿದೆ.

ಆಂಧ್ರಪ್ರದೇಶದ ರೈತ ರಾಮಪ್ಪ, ಎಪಿಎಂಸಿಗೆ ತಂದಿದ್ದ ಉತ್ಕೃಷ್ಟ ಗುಣಮಟ್ಟದ ಶೇಂಗಾ ಕ್ವಿಂಟಲ್‌ಗೆ ₹10,259 ದರಕ್ಕೆ ಮಾರಾಟವಾಗಿದೆ. ಬಳ್ಳಾರಿಯ ಎಪಿಎಂಸಿಯ ಇತಿಹಾಸದಲ್ಲೇ ಇದು ದಾಖಲೆ. ತಿಂಗಳ ಹಿಂದೆ ಕ್ವಿಂಟಲ್ ಶೇಂಗಾ ₹7,000 ರಿಂದ ₹7,500 ದರದಲ್ಲಿ ಮಾರಾಟವಾಗಿತ್ತು.

ಪ್ರತಿ 100 ಗ್ರಾಂ ಶೇಂಗಾದಲ್ಲಿ (ಸಿಪ್ಪೆ ಸಹಿತ), ಬೀಜದ ಪ್ರಮಾಣ 75 ಗ್ರಾಂನಷ್ಟು ಇರಬೇಕು. ಇಂಥ ಉತ್ಪನ್ನಕ್ಕೆ ಉತ್ತಮ ಬೆಲೆ ಸಿಗುತ್ತಿದೆ. ಬೀಜದ ಪ್ರಮಾಣಕ್ಕೆ ಅನುಗುಣವಾಗಿ ಎಪಿಎಂಸಿಯಲ್ಲಿ ಬೆಲೆ ಸಿಗುತ್ತಿದೆ.

'ಮಾರುಕಟ್ಟೆಗೆ ಬರುತ್ತಿರುವ ಶೇಂಗಾ ಪ್ರಮಾಣವೂ ಕಡಿಮೆ. ಹೀಗಾಗಿ ಉತ್ತಮ ಬೆಲೆ ಸಿಗುತ್ತಿದೆ. ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಏರಿಕೆ ಆಗುವ ಸಾಧ್ಯತೆಗಳಿವೆ. ₹11 ಸಾವಿರದ ಗಡಿ ದಾಟಿದರೂ ಅಚ್ಚರಿ ಇಲ್ಲ' ಎಂದು ಎಪಿಎಂಸಿ ಮಧ್ಯವರ್ತಿಗಳ ಸಂಘದ ಮುಖಂಡ ಗುರುಸ್ವಾಮಿ ತಿಳಿಸಿದರು.

'ಬಳ್ಳಾರಿ ಎಪಿಎಂಸಿಗೆ ನಿತ್ಯ ತಲಾ 30 ಕೆಜಿ ತೂಕದ 400ರಿಂದ 1000 ಚೀಲ ಶೇಂಗಾ ಬರುತ್ತಿದೆ' ಎಂದು ವರ್ತಕರು ಮಾಹಿತಿ ನೀಡಿದ್ದಾರೆ. ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್‌ಎಕ್ಯೂ ಗುಣಮಟ್ಟದ ಶೇಂಗಾಕ್ಕೆ ಕ್ವಿಂಟಲ್‌ಗೆ ₹7,263 ನಿಗದಿ ಆಗಿದೆ.

ಆಂಧ್ರದ ರೈತರಿಗೆ ಲಾಭ

ಬಳ್ಳಾರಿ ಜಿಲ್ಲೆಯು ಭಾಗಶಃ ನೀರಾವರಿ ಪ್ರದೇಶವಾಗಿದ್ದು ಶೇಂಗಾ ಕೃಷಿ ಕಡಿಮೆಯಿದೆ. ಬೆಲೆ ಏರಿಕೆಯ ಲಾಭ ಆಂಧ್ರ ಪ್ರದೇಶದ ಅನಂತಪುರ, ಕರ್ನೂಲು ಜಿಲ್ಲೆಗಳ ರೈತರಿಗೆ ಸಿಗಲಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ರೈತರು ಬಳ್ಳಾರಿ ಎಪಿಎಂಸಿಗೆ ಶೇಂಗಾ ಮಾರಲು ಬರುತ್ತಾರೆ.

ಬಳ್ಳಾರಿ ಎಪಿಎಂಸಿಯಲ್ಲಿ ಕ್ವಿಂಟಲ್ ಶೇಂಗಾ ದರ ₹10 ಸಾವಿರ ತಲುಪಿದ್ದ ಉದಾಹರಣೆ ಇರಲಿಲ್ಲ. ಇದೇ ಮೊದಲ ಬಾರಿಗೆ ಈ ಗಡಿ ದಾಟಿದೆ.

ಶೇಂಗಾ ಅವಕ ಕಡಿಮೆಯಾಗಿದ್ದು ಬೆಲೆ ಏರಿಕೆಗೆ ಕಾರಣ

ವಿಜಯಕುಮಾರ್,
ಎಪಿಎಂಸಿ ಕಾರ್ಯದರ್ಶಿ, ಬಳ್ಳಾರಿ

ಮಾರುಕಟ್ಟೆ ದರ ಬೆಂಬಲ ಬೆಲೆಗಿಂತಲೂ ಅಧಿಕವಾಗಿದೆ.

Prajavani Pg.8

ತಾಜಾ ಬೆಳ್ಳುಳ್ಳಿ ಮತ್ತು ಬೆಳ್ಳುಳ್ಳಿ ಪುಡಿ

ಅಡುಗೆ ಮಾಡುವ ಮಧ್ಯದಲ್ಲಿ ಬೆಳ್ಳುಳ್ಳಿ ಖಾಲಿಯಾಗಿರುವುದು ಗಮನಕ್ಕೆ ಬಂದರೆ ಅದನ್ನು ತಕ್ಷಣ ತರಲಾಗದು ಎಂಬ ಕಾರಣಕ್ಕೆ ಈಗಿನವರು ಬೆಳ್ಳುಳ್ಳಿ ಪುಡಿಯನ್ನು ತಂದಿಡುತ್ತಾರೆ. ಬೆಳ್ಳುಳ್ಳಿಯ ಸಿಪ್ಪೆತೆಗೆಯುವ ಕೆಲಸವಿಲ್ಲ ಎಂಬುದಕ್ಕೂ ಉದ್ಯೋಗಸ್ಥರು ಬೆಳಗ್ಗಿನ ಅವಸರದ ಅಡುಗೆಗೆ ಶುದ್ಧ ಬೆಳ್ಳುಳ್ಳಿ ಪುಡಿ ಬಳಕೆಗೆ ಆದ್ಯತೆ ನೀಡುತ್ತಾರೆ. ಇದು ಕೂಡ ತಾಜಾ ಬೆಳ್ಳುಳ್ಳಿಯಷ್ಟೇ ಖಾದ್ಯಗಳ ರುಚಿ ಹೆಚ್ಚಿಸುತ್ತದೆ. ಆದರೆ ಇದನ್ನು ಬಳಸುವಾಗ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ:

✦ ಅನೇಕರು ಖಾದ್ಯಕ್ಕೆ ಒಂದು ಎಸಳು ತಾಜಾ ಬೆಳ್ಳುಳ್ಳಿಗೆ ಅರ್ಧ ಟೀ ಸ್ಪೂನ್ ಬೆಳ್ಳುಳ್ಳಿ ಪುಡಿ ಸಮವೆಂದು ಭಾವಿಸಿ ಆ ಪ್ರಮಾಣ



ದಲ್ಲಿ ಪುಡಿ ಹಾಕುತ್ತಾರೆ. ಆದರೆ ಇದರಿಂದ ಖಾದ್ಯ ಕಹಿ ರುಚಿ ಬೀರುತ್ತದೆ. ಯಾಕೆಂದರೆ ಒಂದು ಎಸಳು ತಾಜಾ ಬೆಳ್ಳುಳ್ಳಿಗೆ ಅರ್ಧ ಟೀ ಸ್ಪೂನ್ ಬೆಳ್ಳುಳ್ಳಿ ಪುಡಿ ಸಮವಲ್ಲ.

✦ ಒಂದು ಬೆಳ್ಳುಳ್ಳಿ ಎಸಳಿಗೆ ಕೇವಲ 1/8 ಟೀ ಸ್ಪೂನ್ ಬೆಳ್ಳುಳ್ಳಿ ಪುಡಿ ಸಮ. ಸೂಕ್ತ ಪ್ರಮಾಣದ ಬಳಕೆಯಿಂದ ಆಹಾರ ರುಚಿಗೆಡುವುದೂ ತಪ್ಪುತ್ತದೆ.

ಲವಲವಿಕ ಕಿಚನ್ TIPS

✦ ಬೆಳ್ಳುಳ್ಳಿಯನ್ನು ಚೆನ್ನಾಗಿ ಒಣಗಿಸುವ ಪ್ರಕ್ರಿಯೆಯು ಅದರ ಪರಿಮಳದ ಸಂಯೋಜನೆಯೊಂದಿಗೆ ಕೇಂದ್ರಿತವಾಗಿರುತ್ತದೆ. ನಿರ್ಜಲೀಕರಣದ ವೇಳೆ ಬೆಳ್ಳುಳ್ಳಿಯು ಶೇ.60ರಷ್ಟು ನೀರಿನಂಶವನ್ನು ಕಳೆದುಕೊಳ್ಳುತ್ತದೆ. ಇದರ ಉಳಿದ ಭಾಗದಿಂದ ತಯಾರಿಸಲಾಗುವ ಬೆಳ್ಳುಳ್ಳಿ ಪುಡಿ ರುಚಿ, ಸಾಂದ್ರತೆಯಲ್ಲೂ ತೀಕ್ಷ್ಣ.

✦ ಸೂಪ್, ಕ್ಯಾಸರೋಲ್‌ಗಳಿಗೆ 1/8 ಟೀ ಸ್ಪೂನ್ ಬೆಳ್ಳುಳ್ಳಿ ಪುಡಿ ಸೂಕ್ತ. ಆದರೆ ರಾ ಗಾರ್ಲಿಕ್ ಸಾಸ್, ಹುದುಗು ಬರಿಸುವ ಪ್ರಕ್ರಿಯೆಗಳಿಗೆ ತಾಜಾ ಬೆಳ್ಳುಳ್ಳಿ ಉತ್ತಮ. ■

Vijaya Karnataka Pg.09

ಬಾಡಿದ ಬೆಳೆಗಾರರ ಮೊಗ, ಅವಧಿಪೂರ್ವ ಮಳೆಗೆ ನಷ್ಟ

ಕಾಫಿ ಹಣ್ಣಿನ ನಡುವೆ ಅರಳಿದ ಹೂಗಳು

• ಸಿ.ಎಸ್.ಸುರೇಶ್

ನಾಪೋಕ್ಲು (ಕೊಡಗು ಜಿಲ್ಲೆ): ಹತ್ತು ದಿನಗಳ ಹಿಂದೆ ಸುರಿದ ಮಳೆಯು ಸಂತಸದಲ್ಲಿದ್ದ ಕಾಫಿ ಬೆಳೆಗಾರರನ್ನು ಚಿಂತಿತರನ್ನಾಗಿಸಿದೆ. ಹೋಬಳಿ ವ್ಯಾಪ್ತಿಯ ತೋಟಗಳಲ್ಲಿ ಕಾಫಿ ಹೂಗಳು ಅರಳಿದ್ದು ತೋಟವೆಲ್ಲ ಘಮಘಮಿಸುತ್ತಿದ್ದರೂ, ಬೆಳೆಗಾರರ ಮುಖದಲ್ಲಿ ಮಂದಹಾಸ ಕಾಣುತ್ತಿಲ್ಲ.

ಸಾಮಾನ್ಯವಾಗಿ ಫೆಬ್ರುವರಿ ಅಂತ್ಯಕ್ಕೆ ಅಥವಾ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಅರಳುತ್ತಿದ್ದ ಹೂಗಳು ತಿಂಗಳ ಮೊದಲೇ ಅರಳಿವೆ. ತೋಟಗಳಲ್ಲಿ ಭಾಗಶಃ ಹೂಗಳು ಅರಳಿದ್ದು, ಮುಂಬರುವ ಬೆಳೆ ಹೇಗೋ ಎಂಬ ಆತಂಕವನ್ನು ತಂದೊಡ್ಡಿದೆ.

ನಾಲ್ಕುನಾಡು ವ್ಯಾಪ್ತಿಯ ಕಕ್ಕಬೆ, ಕುಂಬಿಲ, ನೆಲಜಿ, ಬಲ್ಲಮಾವಟಿ, ಬೋಣಕೆರೆ ಸೇರಿ ಹಲವು ಗ್ರಾಮಗಳಲ್ಲಿ ಕಾಫಿಕೊಯ್ಲು ಆರಂಭಗೊಂಡಿದೆ. ಇದೇ ವೇಳೆಗೆ ಮಳೆಯ ಸಿಂಚನವಾಗಿ ಹೂಗಳು ಅರಳಿರುವುದರಿಂದ ಕೊಯ್ಲು ಕೆಲಸವನ್ನು ಅನಿವಾರ್ಯವಾಗಿ ಬೆಳೆಗಾರರು ಸ್ಥಗಿತಗೊಳಿಸಿದ್ದಾರೆ.

'ಜನವರಿ ಮತ್ತು ಫೆಬ್ರವರಿ ತಿಂಗಳು ಕಾಫಿ ಕೊಯ್ಲಿನ ಬಿರುಸಿನ ದಿನಗಳು. ಕಾಫಿ ಕೊಯ್ದಾದ ಬಳಿಕ ಮಳೆ ಸುರಿದರೆ ಕಾಫಿಯ ಮೊಗ್ಗು ಅರಳಿ ಮುಂದಿನ ವರ್ಷದ ಫಸಲು ನಿರ್ಧಾರವಾಗುತ್ತದೆ. ಆದರೆ, ಈ ಬಾರಿ ಇನ್ನೂ ಕಾಫಿ ಕೊಯ್ಲು ಮುಗಿದಿಲ್ಲ. ಅಗಲೇ ಮಳೆಯಾಗಿ, ಹೂ ಅರಳಿರುವುದರಿಂದ ಕೊಯ್ಲು ಸಾಧ್ಯವಾಗುತ್ತಿಲ್ಲ. ಮಳೆಯಿಂದ ಹಣ್ಣಾದ ಕಾಫಿ ಸಹ ನೆಲಕಚ್ಚುತ್ತಿವೆ' ಎಂದು ನೆಲಜಿ ಗ್ರಾಮದ ಬೆಳೆಗಾರ ಕುಶಾಲಪ್ಪ ಅಳಲು ತೋಡಿಕೊಂಡರು. ಸದ್ಯ ಬಿಸಿಲು ಹೆಚ್ಚಿದ್ದು ಕಾಫಿ ಒಣಗಿಸುವ ಕೆಲಸ ಭರದಿಂದ ಸಾಗಿದೆ.

'ಕಾಫಿ ಕೊಯ್ಲಿನೊಂದಿಗೆ ಹೂಗಳನ್ನು ಜತನದಿಂದ ಕಾಯ್ದುಕೊಳ್ಳ ಬೇಕಾಗಿದೆ. ಫೆಬ್ರುವರಿ ಅಂತ್ಯದಲ್ಲಿ ಮಳೆ ಸುರಿದಿದ್ದರೆ ಹೆಚ್ಚು ಪ್ರಯೋಜನ ಕಾರಿಯಾಗುತ್ತಿತ್ತು. ತೋಟದ ಎಲ್ಲಾ ಕೆಲಸಗಳಿಗೆ ಅಡಚಣೆಯಾಗಿದೆ' ಎಂದು ಬಲ್ಲಮಾವಟಿ ಗ್ರಾಮದ ಬೆಳೆಗಾರ ಮಾಚಯ್ಯ ಹೇಳಿದರು.



ಕೊಡಗು ಜಿಲ್ಲೆಯ ನಾಪೋಕ್ಲು ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಆಕಾಲಿಕ ಮಳೆಯಿಂದ ಕಾಫಿಯ ಗಿಡಗಳಲ್ಲಿ ಹಣ್ಣಿನ ಜೊತೆಗೆ ಹೂಗಳೂ ಅರಳಿವೆ

ಮುಖ್ಯಾಂಶಗಳು

- ಜನವರಿಯಲ್ಲೇ ಹಲವೆಡೆ ಮಳೆ
- ಮಳೆಯಿಂದ ಅರಳಿದ ಕಾಫಿ ಹೂಗಳು
- ಮುಂದಿನ ಬೆಳೆ ಇಳುವರಿ ಮೇಲೆ ಪರಿಣಾಮ

ಕೊಡಗಿನ ಕೆಲವೆಡೆ ಈಚೆಗೆ ಸುರಿದ ಮಳೆಯಿಂದ ರೊಬಸ್ಟಾ ಕಾಫಿ ಹೂ ಅರಳಿದೆ. ಇದು ಮುಂದಿನ ಬೆಳೆಯ ಇಳುವರಿ ಮೇಲೆ ಪರಿಣಾಮ ಬೀರಲಿದೆ
ಚಂದ್ರಶೇಖರ್,
ಕಾಫಿ ಮಂಡಳಿ ಉಪನಿರ್ದೇಶಕ

ಗಿಡದಲ್ಲಿಯೇ ಒಣಗುತ್ತಿದೆ ಕಾಫಿ ಹಣ್ಣು

ಚಿಕ್ಕಮಗಳೂರು: ಹತ್ತು ದಿನಗಳ ಹಿಂದೆ ಸುರಿದ ಮಳೆಯಿಂದ ಕಾಫಿ ಹೂವುಗಳು ಅರಳಿದ್ದು, ಇದು ಬೆಳೆಗಾರರ ಬದುಕನ್ನು ಮಂಕಾಗಿಸಿದೆ.

ಕಾಫಿ ಹಣ್ಣು ಕೊಯ್ಲಿನ ಸಂದರ್ಭದಲ್ಲಿ ಹೂವು ಅರಳಿರುವುದು ಬೆಳೆಗಾರರನ್ನು ಚಿಂತೆಗೀಡು ಮಾಡಿದೆ. ಈಗ ಹೂವು ಅರಳಿದರೆ ಮುಂದಿನ ವರ್ಷದ ಫಸಲಿನ ಮೇಲೆ ಪರಿಣಾಮ ಬೀರಲಿದೆ. ಶೇ 50ರಷ್ಟು ಇಳುವರಿ ಕಡಿಮೆಯಾಗಲಿದೆ ಎಂಬುದು ಬೆಳೆಗಾರರ ಆತಂಕವಾಗಿದೆ.

ಯುಗಾದಿ ನಂತರ ಬರುವ ರೋಹಿಣಿ ಮಳೆಯನ್ನು ಹೂವಿನ ಮಳೆ ಎಂದು ಕಾಫಿ ಬೆಳೆಗಾರರು ಕರೆಯುತ್ತಾರೆ. ಆದರೆ, ಈ ವರ್ಷ ಜನವರಿಯಲ್ಲಿ ಸುರಿದ ಮಳೆಯಿಂದಾಗಿ ಯಾವುದೇ ಕಾಫಿ ತೋಟಕ್ಕೆ ಹೋದರೂ ಹೂವಿನ ಪರಿಮಳ ಹರಡಿದೆ. ಇನ್ನು ನೀರು ಸಿಗದಿದ್ದರೆ ಈಗ ಅರಳಿರುವ ಹೂವು ಉದುರಿ ಹೋಗಲಿದ್ದು, ಮುಂದಿನ ವರ್ಷದ ಫಸಲು ಭಾರಿ ಪ್ರಮಾಣದಲ್ಲಿ ಕಡಿಮೆಯಾಗಲಿದೆ ಎಂದು ಬೆಳೆಗಾರರು ಅಂದಾಜಿಸಿದ್ದಾರೆ.

'ಈ ಮಳೆ ಎರಡು ವರ್ಷಗಳ ಫಸಲನ್ನು ಆಹುತಿ ಪಡೆದಿದೆ. ಹಣ್ಣಿನ ಮೇಲೆ ಮಳೆಯಾಗಿದ್ದರಿಂದ ಕಾಫಿ ಹಣ್ಣು ಗಿಡದಲ್ಲಿಯೇ ಒಣಗುತ್ತಿದ್ದು, ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ. ಮಳೆಯಿಂದ ಪೂರ್ಣ ಪ್ರಮಾಣದಲ್ಲಿ ಹೂವಾಗದ ಕಾರಣ ಮುಂದಿನ ಫಸಲಿಗೂ ನಷ್ಟವಾಗಿದೆ' ಎಂದು ಬೆಳೆಗಾರರು ಹೇಳುತ್ತಾರೆ.

ಈ ಅಕಾಲಿಕ ಮಳೆ ಅರೇಬಿಕಾ ಕಾಫಿಗಿಂತ ರೊಬಸ್ಟಾ ಕಾಫಿಗೆ ಹೆಚ್ಚು ಹಾನಿ ಮಾಡಿದೆ ಎಂದು ಕಾಫಿ ಮಂಡಳಿ ಅಧ್ಯಕ್ಷ ಎಂ.ಜಿ. ದಿನೇಶ್ ಹೇಳಿದರು.

Bengaluru

26.01.2026 Prajavani Pg.08

ಲಾಲ್‌ಬಾಗ್ ಸುತ್ತಲಿನ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ | ಇಂದು ಫಲಪುಷ್ಪ ಪ್ರದರ್ಶನಕ್ಕೆ ತೆರೆ

ಫ್ಲವರ್ ಶೋಗೆ ಒಂದೇ ದಿನ 1.14 ಲಕ್ಷ ಮಂದಿ!

■ **ವಿಕ ಸುದ್ದಿಲೋಕ** ಬೆಂಗಳೂರು

ಸಸ್ಯಕಾಶಿ ಲಾಲ್‌ಬಾಗ್‌ಗೆ ಭಾನುವಾರ ಜನಸಾಗರವೇ ಹರಿದು ಬಂದಿತ್ತು. ಬರೋಬ್ಬರಿ 1,14,626 ಮಂದಿ ಆಗಮಿಸಿ ಫಲಪುಷ್ಪ ಪ್ರದರ್ಶನ ಕಣ್ತುಂಬಿಕೊಂಡರು.

ಸೋಮವಾರ ಫಲಪುಷ್ಪ ಪ್ರದರ್ಶನಕ್ಕೆ ತೆರೆ ಬೀಳಲಿರುವ ಹಿನ್ನೆಲೆಯಲ್ಲಿ ಮುನ್ನಾದಿನ ಭಾರಿ ಸಂಖ್ಯೆಯ ವೀಕ್ಷಕರು ಆಗಮಿಸಿದ್ದರು. ನೋಡುಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರಿಂದ ಗಾಜಿನ ಮನೆ ಪ್ರವೇಶಿಸಲು ಉದ್ದನೆಯ ಸರತಿ ಸಾಲು ಕಂಡು ಬಂತು. ಹೀಗಾಗಿ, ಭದ್ರತಾ ಸಿಬ್ಬಂದಿ ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟರು.

ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳ ಟಿಕೆಟ್ ಕೌಂಟರ್‌ಗಳ ಬಳಿಯೂ ಜನಸಾಗರವೇ ನೆರೆದಿತ್ತು. ಹೀಗಾಗಿ, ಸರತಿ ಸಾಲು ರಸ್ತೆ ತಲುಪಿತ್ತು. ಲಾಲ್‌ಬಾಗ್ ಸುತ್ತಲಿನ ರಸ್ತೆಗಳಲ್ಲಿ ಇಡೀ ದಿನ ಸಂಚಾರ ದಟ್ಟಣೆ ಇತ್ತು. ಸಂಜೆ ವೇಳೆಗೆ ಸಂಚಾರ ದಟ್ಟಣೆ ಮತ್ತಷ್ಟು ಹೆಚ್ಚಾಗಿತ್ತು. ಇದರಿಂದ ವಾಹನ ಸವಾರರು ಪರದಾಡುವಂತಾಗಿತ್ತು.



ಲಾಲ್‌ಬಾಗ್‌ನ ಗಾಜಿನಮನೆಯಲ್ಲಿ ವೀಕ್ಷಕರ ದಟ್ಟಣೆ.



ಭಾನುವಾರದವರೆಗೆ 6.33 ಲಕ್ಷ ಮಂದಿ ಆಗಮನ

ಜ.15 ರಿಂದ 25ರವರೆಗೆ ಶಾಲಾ ಮಕ್ಕಳೂ ಸೇರಿದಂತೆ 6.33 ಲಕ್ಷ ಮಂದಿ ಆಗಮಿಸಿದ್ದು, 1.81 ಕೋಟಿ ರೂ. ಹಣ ಸಂಗ್ರಹವಾಗಿದೆ ಎಂದು ತೋಟಗಾರಿಕೆ ಇಲಾಖೆ ಮೂಲಗಳು ತಿಳಿಸಿವೆ.

26.01.2026 Vijayakarnataka Pg.13